ದಿನಾಂಕ 07-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1 ನೇ ಪ್ರತಿವಾದಿಯ ಪರ ಶ್ರೀ ಆರ್.ವಿ.ಡಬ್ಲ್ಯೂ ವಕೀಲರಿಂದಃ**

1. ಕೊಪ್ಪರಿಸಿಕೊಪ್ಪ ಗ್ರಾಮದ ಸ ನಂಃ 167/1 ಕ್ಷೇತ್ರ 2 ಎಕರೆ 15 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಈ ದಾವೆಯನ್ನು ಸಲ್ಲಿಸಿದ್ದೇನೆ. ದಾವಾ ಆಸ್ತಿಯು ಸುಭಾಷ್ ರವರಿಗೆ ಹಿಸ್ಸೇಯ ಮುಖಾಂತರ ಬಂದಿರುತ್ತದೆ. ಸದರಿ ಹಿಸ್ಸೇಯು 1987 ರಲ್ಲಿ ಆಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯು ಸದರಿ ವಿಭಾಗದಲ್ಲಿ ಸಂಪೂರ್ಣವಾಗಿ ಸುಭಾಷ್ ರವರ ಹಿಸ್ಸೇಗೆ ಬಂದಿರುತ್ತದೆ ಎಂದರೆ ಸರಿ. ದಾವಾ ಜಮೀನು ಸುಭಾಷ್ ರವರ ಹಿಸ್ಸೇಗೆ ಬಂದ ನಂತರ ಆತನೇ ವಹಿವಾಟು ಮಾಡುತ್ತಿದ್ದನು ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರಸ್ತುತ ದಾವಾ ಆಸ್ತಿಯನ್ನು ನಾನೇ ವಹಿವಾಟು ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಕಳೆದ 25 ವರ್ಷಗಳಿಂದ ನಾನೇ ಲಾವಣಿ ಆಧಾರದ ಮೇಲೆ ವಹಿವಾಟು ಮಾಡುತ್ತಿದ್ದೇನೆ. ದಾವಾ ಆಸ್ತಿಯನ್ನು ಲಾವಣಿ ಆಧಾರದ ಮೇಲೆ ವಹಿವಾಟು ಮಾಡಲು ಇರಬಹುದಾದ ಕಾನೂನಿನ ವಿಚಾರಗಳನ್ನು ಮತ್ತು ಸಲಹೆಗಳನ್ನು ವಕೀಲರಿಂದ ಪಡೆದಿರುವುದಿಲ್ಲ.

2. ಸುಭಾಷ್ ರವರು ದಾವಾ ಆಸ್ತಿಯನ್ನು ಯಾವ ಸಮಯದಲ್ಲೂ ವಹಿವಾಟು ಮಾಡಲು ನನಗೆ ಲಾವಣಿ ಆಧಾರದ ಮೇಲೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸುಭಾಷ್ ರವರು ನನ್ನ ತಂದೆಯ ತಮ್ಮನಾಗಿರುತ್ತಾರೆ. ಕುಟುಂಬದಲ್ಲಿ ಸದಸ್ಯರಿಗೆ ಸಮಸ್ಯೆ ಆದಾಗ ಇತರ ಸದಸ್ಯರು ಸಹಾಯ ಮಾಡುವುದು ಸಹಜ ಎಂದರೆ ಸರಿ. ಸುಭಾಷ್ ರವರಿಗೆ ಸಮಸ್ಯೆಗಳು ಆದಾಗ ದಾವಾ ಜಮೀನನ್ನು ವಹಿವಾಟು ಮಾಡಲು ಆತನಿಗೆ ಸಹಾಯ ಮಾಡುತ್ತಿದ್ದೆ ಎಂದರೆ ಸರಿ.

3. ದಾವಾ ಆಸ್ತಿಯನ್ನು ನನ್ನ ಚಿಕ್ಕಪ್ಪ 3 ನೇ ವ್ಯಕ್ತಿಗೆ ಮಾರಾಟ ಮಾಡಿರುವ ವಿಷಯ ತಿಳಿದು ಬಂದಿದ್ದರಿಂದ ಈ ದಾವೆಯನ್ನು ಸಲ್ಲಿಸಲು ಕಾರಣ ಉಂಟಾಗಿರುತ್ತದೆ. ದಾವಾ ಜಮೀನಿನಲ್ಲಿ ನಾನು ಬಿತ್ತನೆ ಮಾಡುವಾಗ 2 ನೇ ಪ್ರತಿವಾದಿ ಬಂದು ದಾವಾ ಆಸ್ತಿಯನ್ನು ನಾನು ಖರೀದಿ ಮಾಡಿರುತ್ತೇನೆ ಎಂದು ತಿಳಿಸಿದ ಕಾರಣಕ್ಕೆ ಆತನ ವಿರುದ್ದವೂ ಈ ದಾವೆಯನ್ನು ಸಲ್ಲಿಸಿದ್ದೇನೆ. ನನ್ನ ಚಿಕ್ಕಪ್ಪ 1 ನೇ ಪ್ರತಿವಾದಿಯನ್ನು ದಾವಾ ಆಸ್ತಿಗೆ ಸಂಬಂಧಿಸಿದಂತೆ ಖರೀದಿ ಕರಾರು ಪತ್ರವನ್ನು 2 ನೇ ಪ್ರತಿವಾದಿಗೆ ಬರೆದುಕೊಟ್ಟ ಬಗ್ಗೆ ವಿಚಾರ ಮಾಡಿರುತ್ತೇನೆ. ಆ ರೀತಿ ವಿಚಾರಣೆ ಮಾಡಿದಾಗ 1 ನೇ ಪ್ರತಿವಾದಿಯು ತನಗೆ ಆರ್ಥಿಕ ಅಡಚಣೆ ಇರುವ ಕಾರಣಕ್ಕೆ ದಾವಾ ಆಸ್ತಿಯನ್ನು ರೂ.4,80,000/- ಗಳಿಗೆ ಮಾರಾಟ ಮಾಡಲು ಒಪ್ಪಿ ಖರೀದಿ ಕರಾರು ಬರೆದುಕೊಟ್ಟಿರುತ್ತೇನೆ ಎಂದು ನನಗೆ



ತಿಳಿಸಿರುತ್ತಾರೆ. ನಾನು ಆ ರೀತಿ ವಿಚಾರ ಮಾಡಿದಾಗ 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಯಿಂದ ಆರ್ಥಿಕ ಅಡಚಣೆಗೆ ಸಾಲವನ್ನು ಪಡೆದಿದ್ದು, ಆ ಸಾಲದ ಭದ್ರತೆಗಾಗಿ ಕ್ರಯದ ಕರಾರು ಪತ್ರವನ್ನು ಬರೆದು ಕೊಟ್ಟಿರುತ್ತೇನೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಮೇಲಿನಂತೆ ನನಗೆ ತಿಳಿಸಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಖರೀದಿ ಕರಾರು ಪತ್ರವನ್ನು ಪಡೆದುಕೊಂಡು ನೋಡಿದಾಗ 2 ನೇ ಪ್ರತಿವಾದಿಗೆ ಅದರ ಅಡಿಯಲ್ಲಿ ಹಕ್ಕು ಸೃಷ್ಟಿಸಿರುವುದಿಲ್ಲ ಎಂದು ನನಗೆ ತಿಳಿದು ಬಂದಿರುತ್ತದೆ. ದಾವಾ ಆಸ್ತಿಯನ್ನು ನನಗೆ ಮಾರಾಟ ಮಾಡುವಂತೆ ಕೋರಿ 1 ನೇ ಪ್ರತಿವಾದಿಯ ವಿರುದ್ದ ಈ ದಾವೆಯನ್ನು ಸಲ್ಲಿಸಲು ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯು ನನ್ನ ಮತ್ತು 1 ನೇ ಪ್ರತಿವಾದಿಯ ಮೂಲ ಪಿತ್ರಾರ್ಜಿತ ಆಸ್ತಿ ಆಗಿರುವುದರಿಂದ ಅದನ್ನು ನನಗೆ ಮಾರಾಟ ಮಾಡುವಂತೆ ಕೇಳಲು ಹಕ್ಕು ಇರುತ್ತದೆ ಎಂದು ನುಡಿಯುತ್ತಾರೆ. 1987 ರಲ್ಲಿ ನನ್ನ ತಂದೆ ಮತ್ತು ಆತನ ಸಹೋದರರು ವಿಭಾಗ ಆದ ನಂತರ ಕುಟುಂಬದಲ್ಲಿ ಒಟ್ಟು ಕುಟುಂಬವು ನಶಿಸಿರುತ್ತದೆ ಎಂದರೆ ಸರಿಯಲ್ಲ.

5. ನನ್ನ ವಾದ ಪತ್ರದಲ್ಲಿ ದಾವಾ ಆಸ್ತಿಯು 1 ನೇ ಪ್ರತಿವಾದಿ ಮತ್ತು ಮೃತ ವಸಂತಪ್ಪ ರವರಿಗೆ ಜಂಟಿಯಾಗಿ ಬಂದಿರುತ್ತದೆ ಎಂದು ಬರೆಸಿರುತ್ತೇನೆ. ನಾನು ವಿದ್ಯಾಭ್ಯಾಸ ಮಾಡದೇ ಇರುವುದರಿಂದ ಓದಲು ಬರುವುದಿಲ್ಲ. ಎಂ.ಇ ಸಂಃ 1492 ರಲ್ಲಿ ನಮೂದು ಇರುವ ಪ್ರಕಾರ ದಾವಾ ಆಸ್ತಿಯು 1 ನೇ ಪ್ರತಿವಾದಿಯ ಹಿಸ್ಸೇಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಡ ನಮೂದಿನ ಪ್ರಕಾರ ದಾವಾ ಜಮೀನು ನಾನು ಹೇಳಿರುವಂತೆ 1 ನೇ ಪ್ರತಿವಾದಿ ಮತ್ತು ವಸಂತಪ್ಪ ರವರ ಜಂಟಿ ಹಿಸ್ಸೇಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ವಸಂತಪ್ಪ ರವರ ಮಕ್ಕಳು ಈ ದಾವೆಯಲ್ಲಿ ಪಕ್ಷಕಾರರು ಇರುತ್ತಾರೆ. ಆತನ ಮಕ್ಕಳ ಹೆಸರು ಪುಂಡಲೀಕ, ದೀಪಾ ಹಾಗೂ ರುಕ್ಮೀಣಿ ಅವರು



ಆಗಿರುತ್ತಾರೆ. ಅವರ ವಿರುದ್ದವೂ ನಾನು ದಾವೆಯಲ್ಲಿ ಪರಿಹಾರ ಕೋರಿರುವುದಿಲ್ಲ ಎಂದರೆ ಸಾಕ್ಷಿಯು ಅವರೂ ಸಹ ನನ್ನಂತೆಯೇ ದಾವಾ ಆಸ್ತಿಯನ್ನು ಖರೀದಿಸಲು ತಯಾರು ಇರುತ್ತಾರೆ ಎಂದು ನುಡಿಯುತ್ತಾರೆ.

6. ದಾವಾ ಆಸ್ತಿಯು 1987 ರ ವಿಭಾಗದ ಪ್ರಕಾರ 1 ನೇ ಪ್ರತಿವಾದಿಯ ಹಿಸ್ಸೇಗೆ ಮಾತ್ರ ಬಂದಿದ್ದು, ಪಹಣಿ ಪತ್ರಿಕೆಯಲ್ಲಿ 1 ಎಕರೆ 29 ಗುಂಟೆ ಜಮೀನು ವಸಂತಪ್ಪ ಅವರ ಮಕ್ಕಳ ಹೆಸರಿನಲ್ಲಿ ಇರುವುದನ್ನು ದುರುಪಯೋಗಪಡಿಸಿಕೊಂಡು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಕ್ರಯದ ಕರಾರು ಪತ್ರವನ್ನು ಕೇವಲ ಸಾಲದ ಭದ್ರತೆಗಾಗಿ 2 ನೇ ಪ್ರತಿವಾದಿಯ ಪರವಾಗಿ ಬರೆದುಕೊಟ್ಟಿದ್ದು ನಿಜವಾಗಿಯೂ ದಾವಾ ಆಸ್ತಿಯನ್ನು ಮಾರಾಟ ಮಾಡುವ ಇಚ್ಚೆ ಆತನಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆತನಿಗೆ ಯಾವುದೇ ಹಣಕಾಸಿನ ಸಮಸ್ಯೆ ಇರುವುದಿಲ್ಲ ಮತ್ತು ಚೆನ್ನಾಗಿ ಇರುತ್ತಾರೆ ಎಂದು ನುಡಿಯುತ್ತಾರೆ.

7. 1 ನೇ ಪ್ರತಿವಾದಿಗೆ ವಯಸ್ಸಾಗಿದ್ದು ಮತ್ತು ಆರೋಗ್ಯದ ಸಮಸ್ಯೆಯಿಂದ ಬಳಲುತ್ತಿದ್ದಾರೆ ಎಂದರೆ ಸರಿಯಲ್ಲ. ಆತನಿಗೆ ದಾವಾ ಆಸ್ತಿಗೆ ಹೋಗಿ ಬಂದು ಮಾಡಲು ಸಮಸ್ಯೆ ಇರುವ ಕಾರಣಕ್ಕೆ ಅದನ್ನು ವಹಿವಾಟು ಮಾಡಲು ನನ್ನ ಸಹಾಯ ಪಡೆದಿದ್ದು, ಮತ್ತು ಆತನ ಆರೋಗ್ಯದ ಸಮಸ್ಯೆಗೆ ಚಿಕಿತ್ಸೆ ಪಡೆಯಲು ಹಣದ ಅವಶ್ಯಕತೆ ಇರುವ ಕಾರಣಕ್ಕೆ ಕ್ರಯದ ಕರಾರು ಪತ್ರವನ್ನು 2 ನೇ ಪ್ರತಿವಾದಿಯ ಪರ ಬರೆದುಕೊಟ್ಟು ಅದರ ಭದ್ರತೆಗಾಗಿ ಸಾಲವನ್ನು ಪಡೆದಿರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿಯು ಆರ್ಥಿಕವಾಗಿ ಬಹಳ ಶ್ರೀಮಂತನಿದ್ದು, ಶಿರಸಿಯ ಅರ್ಧ ಭಾಗವನ್ನೇ ಕೊಂಡುಕೊಳ್ಳುವ ಸಾಮರ್ಥ್ಯ ಇರುತ್ತದೆ ಎಂದು ನುಡಿಯುತ್ತಾರೆ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು).

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

**Sd/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ